# ಕರ್ನಾಟಕ ವಿಧಾನಸಭೆ

# KARNATAKA LEGISLATIVE ASSEMBLY

*Tuesday the 14th June 1977/Jyieta, 24 1899 S. E.*

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA) in the Chair.]

## STARRED QUESTIONS

(to which oral answers were given)

### Sale of lands by Thoti, Talari and Neeragantis in Anekal Taluk

56. SRI M. B. RAMASWAMY (Anekal).—Will the Minister for Revenue be pleased to state.—

(a) the number of Thoti, Talari and Neeragantis in Anekal Taluk,

(b) the number of Harijans among them who have sold their Inam lands after the Karnataka Village Offices Abolition (Amendment) Ordinance, 1975 (No. 31 of 1975) came into effect and the value of such land ?

SRI N. HUTCHAMASTY GOWDA (Minister for Revenue).—

| (a) | Thoti | Talari | Neeragantis |
|---|---|---|---|
| | 232 | 214 | 109 |

(b) Nil according to the mutation check register.

ಶ್ರೀ ಎಂ.ಬಿ. ರಾಮಸ್ವಾಮಿ.—ನನ್ನ ಪ್ರಶ್ನೆ (ಬಿ)ಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಆದರೆ ಕಳೆದ ಸದನದಲ್ಲಿ ಸುಮಾರು 8 ಲಕ್ಷ ಚಿಲ್ಲರೆ ಬೆಲೆ ಬಾಳತಕ್ಕಂಥ ಜಮೀನು ಪರಭಾರೆ ಮಾಡಿದ್ದಾರೆಂದು ಉತ್ತರ ಕೊಟ್ಟಿದ್ದೀರಿ. ತೋಟಿ ತಳವಾರರನ್ನು 1-2 1963ನೇ ಇಸ್ವಿಯಲ್ಲಿ ಅಬಾಲಿಶ್ ಮಾಡಿದ ಮೇಲೆ ಅವರ ಜಮೀನನ್ನು ಪರಭಾರೆ ಮಾಡಲು ಯಾರಿಗೂ ಅಧಿಕಾರವಿಲ್ಲ ಹಾಗೂ ತೆಗೆದುಕೊಳ್ಳುವ ಹಾಗೂ ಇಲ್ಲವೆಂದು ತಿಳಿಸಿದ್ದೀರಿ. ಆದುದರಿಂದ ಒಂದು ವೇಳೆ ಯಾರಾದರೂ ಪರಭಾರೆ ಮಾಡಿದ್ದರೆ ಅಂಥಾ ಜಮೀನನ್ನು ಸರ್ಕಾರದವರೇ ವಹಿಸಿಕೊಂಡು ಮುಂದೆ ಅವರಿಗೆ ಏನಾದರೂ ಪರಿಹಾರ ಮಾಡಿಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಈ ಪ್ರಶ್ನೆ ಸ್ವಲ್ಪ ಸುಲಭದಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲದ್ದೇ ಇರತಕ್ಕಂಥಾದ್ದು ಏತಕ್ಕೆಂದರೆ ಈ ಕಾನೂನು ಆದ ಮೇಲೆ ಪರಭಾರೆ ಮಾಡುವ ಹಾಗಿಲ್ಲ ಆದರೆ ಅವನಿಗೆ ದೀರ್ಘಾಂತ ಆಗಿದ್ದಾರೆ ಮಾರುವುದಕ್ಕೆ ಸಾಧ್ಯತೆ ಇದೆ ಅವನು ಡೆಪ್ಯುಟಿ ಕಮಿಷ

† Asterisks indicate that the remarks or speeches have not been revised by the member concerned.

ನರರವರ ಅಪ್ಪಣೆ ಪಡೆದು ಮಾರಬಹುದೆಂದು ಇದೆ. ಅದಕ್ಕೆ ಒಂದು ತಿದ್ದುಪಡಿ ತಂದು ರೀಗ್ರಾಂಟ್ ಆದಮೇಲೆ 15 ವರ್ಷಗಳವರೆಗೆ ಪರಭಾರೆ ಮಾಡಲು ಅನುಮತಿ ಕೊಡಬಾರದೆಂದು ಇದೆ. ತಾವು ಹೇಳುವ ಹಾಗೆ ಪ್ರತಿಯೊಂದು ಕೇಸ್‌ನಲ್ಲಿಯೂ ಪರಭಾರೆ ಆಗಿದ್ದರೆ ಅದರ ಬಗ್ಗೆ ವ್ಯವಧಾನದಿಂದ ಪೂರ್ಣವಾಗಿ ತೀರ್ಮಾನ ಮಾಡಿ ನೋಡಬೇಕಾಗುತ್ತದೆ. ಈ ಮಧ್ಯೆ ಒಂದು ಆರ್ಡಿನೆನ್ಸ್ ತಂದು ಪರಭಾರೆ ಮಾಡುವುದನ್ನು ನಿಲ್ಲಿಸಬೇಕೆಂದು ಇದ್ದೆವು, ಆದರೆ ಅದು ಈ ಮಾನ್ಯ ಸಭೆಯಲ್ಲಿ ಪಾಸ್ ಆಗದೇ ಹಾಗೆಯೇ ನಿಂತು ಹೋಯಿತು. ಆದುದರಿಂದ ಇದರ ಬಗ್ಗೆ ನಾನು ರಾಡಿಪಾರ್ಟ್‌ಮೆಂಟಿನವರೊಡನೆ ಕೂಲಂಕಷವಾಗಿ ಚರ್ಚೆ ಮಾಡಿ ಇದರ ಪರಿಣಾಮ ಏನು ಆಗುತ್ತದೆಂಬುದನ್ನು ವಿಚಾರ ಮಾಡಿ ತಿಳಿದು ಈ ಸಭೆಗೆ ಒಂದು ಹೇಳಿಕೆಯನ್ನು ಮಾಡುತ್ತೇನೆ. ಆನೇಕಲ್ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಇದರ ಮಿತಿಯೊಳಗೆ ಉತ್ತರ ಕೊಡುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾತು ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ.ಬಿ. ರಾಮಸ್ವಾಮಿ.—ಆ ಹೇಳಿಕೆಯನ್ನು ನೀವು ಎಂದು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು 2-3 ದಿವಸಗಳಲ್ಲಿ ರಾ ಡಿಪಾರ್ಟ್‌ಮೆಂಟಿನವರೊಡನೆ ಕೂಲಂಕುಷವಾಗಿ ಆಲೋಚನೆ ಮಾಡಿ ಹೇಳಿಕೆಯನ್ನು ಮಾಡುತ್ತೇನೆ.

ಶ್ರೀ ಕೆ.ಆರ್. ಶ್ರೀನಿವಾಸುಲುನಾಯ್ಡು.—ಸ್ವಾಮಿ, ತಮ್ಮ ಉತ್ತರದಿಂದಲೇ ಅರ್ಥವಾಗುತ್ತೆ ನೀವೇ ಒಪ್ಪಿಕೊಳ್ಳುತ್ತಿದ್ದೀರಿ 1-2-1963ನೇ ಇನ್ವಿಯಲ್ಲಿ ಅಪಾಲಿಶನ್ ಆಕ್ಟ್ ಬಂದ ಮೇಲೆ ಅನೇಕ ಜನರು, ಕಾನೂನು ಬಂದಿದ್ದರೂ ಕಾನೂನು ಮೀರಿ ವರ್ತಿಸಬಹುದು, ಕೆಲವರು ಒಳ್ಳೊಳ್ಳೆಯ ಜಾಗವನ್ನು ಹಿಡಿದುಕೊಂಡು ಬಿಚ್ಚಿರಬಹುದು, ಆದುದರಿಂದ ಅಂಥಾ ಜಾಗವನ್ನು ಪುನಃ ಸರ್ಕಾರದವರೇ ವಶಪಡಿಸಿಕೊಂಡು ಬಡವರಿಗೆ ಡಿಸ್ಟ್ರಿಬ್ಯೂಟ್ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಉದ್ದೇಶವೇನೋ ಚೆನ್ನಾಗಿದೆ. ನನ್ನ ಉದ್ದೇಶ ಕೂಡ ಇದನ್ನು ತಪ್ಪಿಸಬೇಕು ಎನ್ನುವುದೇ ಆಗಿದೆ ಅದರ ಕಾನೂನು ಪ್ರಕಾರ ಮಾಡಿಕೊಂಡು ಹೋಗಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ನಾವು ಕಾನೂನು ತಿಳಿದುಕೊಂಡು ನಿಷ್ಪಕ್ಷಪಾತ ಉತ್ತರ ಹೇಳಬೇಕಾಗಿದೆಯೋ ಹೊರತು ಮಾನ್ಯ ಸದಸ್ಯರ ಅಭಿಪ್ರಾಯ ಸಾಧುವಾದುದು ಎಂದು ಹೇಳಿ ನುಲಭವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

## Quantity of foodgrains allotted to taluka of Bangalore District

60. SRI M.B. RAMASWAMY (Anekal).—Will the Minister for Food and Forest be pleased to state:—

(a) the quantity of foodgrains *viz*, rice, wheat, sugar, soji, etc., allotted to each Taluk of Bangalore District during 1975-76,

(b) whether it is a fact that Anekal Taluk has no perennial irrigation resources and there the lands are rain fed ?

SRI K. H. PATIL (Minister for Food and Forest).—

(a) *Vide* Statement—A placed on the Table of the House.**

(b) Yes.

ಶ್ರೀ ಎಂ.ಬಿ. ರಾಮಸ್ವಾಮಿ.—ಸ್ವಾಮಿ ತಾವು ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ಕಾಣಿಸಿರುವಂತೆ ಎಲ್ಲ ಕಡೆ ಸಕ್ಕರೆಯನ್ನು, ಆಹಾರ ಪದಾರ್ಥಗಳನ್ನು ಸಪ್ಲೈ ಮಾಡುತ್ತಿದ್ದೇವೆಂದು ಹೇಳಿರುತ್ತೀರಿ. ಆದರೆ ಇದರಲ್ಲಿ ಬಹುಭಾಗ ಸಕ್ಕರೆ ಮಾತ್ರ ವಿತರಣೆಯಾಗುತ್ತಿದ್ದು, ಬೇರೆ

** Copy placed in the Karnataka Legislature library *vide* No. 13 dated 14th June 1977.